ಪದಬಂಧ




ಎಡದಿಂದ ಬಲಕ್ಕೆ :

1. ಅಹವಾಲು ಸ್ವೀಕರಿಸುವ ಮುನ್ನ ಎಲ್ಲರಿಗೂ ಆಮಂತ್ರಣ (3)
3. ವಿದ್ವತ್ತು ಗಳಿಸಲೇಬೇಕೆಂದು ಅಧ್ಯಯನ ಕೈಗೊಂಡಿರುವವ ಆತ (3)
4. ಮುರುಗನ ಅದ್ಭುತ ದೇವಸ್ಥಾನ ಆ ಊರಿನ ಹೆಚ್ಚುಗಾರಿಕೆ (3)
6. ವ್ಯಾಪಾರದ ವಿಷಯದಲ್ಲೇ ಆತ ಸದಾ ತಲ್ಲೀನ (4)
7. ಬಂಧನದಲ್ಲಿದ್ದಾಗಲೇ ನ್ಯಾಯಕ್ಕಾಗಿ ಪ್ರಾಣಾರ್ಪಣೆ (4)
9. ಗೊತ್ತಾಗದೇ ಕಳೆದು ಹೋಯಿತಲ್ಲ, ಆ ಸಮಯ (4)
11. ಮೂರು ಗಜ ಜಾಗಕ್ಕೆ ನಡೆದ ಹೋರಾಟದಿಂದ ಇರುಸು ಮುರುಸು (4)
15. ಗಂಧರ್ವರಂತೆ ನಟಿಸಿದರೆ ಬೈದು ಹೆದರಿಸು (3)
16. ಲಂಕೆಗೆ ಬಂದು ಹೋದವರ ಖರ್ಚು ವೆಚ್ಚಗಳ ದಾಖಲೆ ಬರೆದವ (3)
17. ಪಹರೆ ಕೆಲಸದಲ್ಲಿ ಆತನಿಗೆ ಭಾರೀ ಉತ್ಸಾಹ (3)

ಮೇಲಿಂದ ಕೆಳಕ್ಕೆ :

1. ಆತುರಕ್ಕೆ ಅವಕಾಶವಿಲ್ಲ; ಈ ತೀರ್ಮಾನ ಹಣಕಾಸು ಕುರಿತದ್ದು (3)
2. ಗಣ್ಯ ಜನರಾಗಲು ನಗನಾಣ್ಯಗಳೇನೂ ಮುಖ್ಯವಲ್ಲ (3)
3. ವ್ಯಾಪಾರದಲ್ಲಿ ಎಲ್ಲೆಲ್ಲೂ ಭಾರೀ ತೊಂದರೆ, ತುಮುಲ (3)
5. ಕಳ್ಳ ಮಾಲಿನ ವಿಚಾರದಲ್ಲಿ ಮೆತ್ತಗಿನ ಮಾತು (3)
6. ಪಾಲುಗಾರಿಕೆಯಲ್ಲಿ ನಿರ್ಮಿಸಲಾದ ಸುಂದರ ಮಂಚ (3)
8. ನಾಶವೇ ಇರದ ಸೃಷ್ಟಿ ಯಾವುದು? ಎಲ್ಲವೂ ಅಸ್ಥಿರ (3)
10. ಕಳ್ಳರ ಜೊತೆಗೆ ನಡೆದದ್ದು ಭಾರೀ ಯುದ್ಧ (3)
12. ಜಗಳ ನಡೆದ ಜಾಗದಲ್ಲಿ ತಲೆ ಕೆಳಕಾದರೂ ಬರೀ ಕಸ, ಕೊಳೆ (3)
13. ಆ ಪ್ರದೇಶದ ಆಹಾರ ಕ್ರಮವನ್ನು ಹೇಳು, ತಿಳಿಸು (3)
14. ಮಂಪರಿನಲ್ಲಿದ್ದಾಗಲೂ ಆತನದು ಭಾರೀ ಗರ್ವ, ಸೊಕ್ಕು (3)

## 23-2-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅನಾದರ; 3. ವಜನು; 4. ಮಾರ್ಜಾಲ; 6. ಧನಬಲ; 7. ತರತಮ (=ತಾರತಮ್ಯ); 9. ಯಜಮಾನಿ; 12. ಅನುನಯ; 14. ನಗರ 15. ಸಮಾನ 16. ಕಪ್ಪುಧನ

ಮೇಲಿಂದ ಕೆಳಕ್ಕೆ :

1. ಅನುಕೂಲ; 2. ರಮಾಕಾಂತ; 3. ವಚನ; 5. ಲಲಿತ; 6. ಧನಂಜಯ; 8. ಮಹನೀಯ; 10. ಜತನ; 11. ನಿರ್ಧಾರಕ 12. ಅಭ್ಯಸನ; 13. ನಮನ

## ಪ್ರಶ್ನಾ ೦ಕಣ

# ಸೂಪರ್ ಮೊಸಳೆ: ಯಾವುದು?

'ಸಾರ್ಕೋಸೂಚಸ್ ಇಂಪರೇಟರ್' ಸೂಪರ್ ಮೊಸಳೆ (ಸೂಪರ್ ಕ್ರೋಕೋಡೈಲ್) ಎಂಬ ಅನನ್ಯ ಅಭಿಧಾನಕ್ಕೆ ಪಾತ್ರವಾಗಿರುವ ಮೊಸಳೆ ಪ್ರಭೇದ ಅದೇ (ಚಿತ್ರ 1). ಏಕೆಂದರೆ ಶರೀರದ ಉದ್ದದಲ್ಲಾಗಲೀ, ಗಾತ್ರದಲ್ಲಾಗಲೀ, ತೂಕದಲ್ಲಾಗಲೀ, ಬೇಟೆ ಸಾಮರ್ಥ್ಯದಲ್ಲಾಗಲೀ ಮೊಸಳೆ ವರ್ಗದ ಹಿಂದಿನ ಮತ್ತು ಇಂದಿನ ಬೇರಾವ ಪ್ರಭೇದವನ್ನೂ (ಚಿತ್ರ 2, 3) ಸಾರ್ಕೋಸೂಚಸ್ ಇಂಪರೇಟರ್ ಗೆ ಹೋಲಿಸುವುದೂ ಸಾಧ್ಯವಿಲ್ಲ. ಆದರೆ, ವಿಪರ್ಯಾಸ ಏನೆಂದರೆ, ಈ ವಿಶ್ವ ವಿಕ್ರಮದ ಮೊಸಳೆ ಪ್ರಭೇದ ಈಗ ಉಳಿದಿಲ್ಲ; ಅದರ ಪ್ರಸ್ತುತ ಅಸ್ತಿತ್ವ ಪಳೆಯುಳಿಕೆಗಳ ರೂಪದಲ್ಲಿ ಮಾತ್ರ.

ಸೂಪರ್ ಮೊಸಳೆ ಧರೆಯಲ್ಲಿ ನೆಲೆಸಿದ್ದ ಕಾಲ ಈಗ್ಗೆ ಹನ್ನೊಂದು ಕೋಟಿ ವರ್ಷ ಹಿಂದೆ. ಆಫ್ರಿಕ್ ಖಂಡದಲ್ಲಿ ಈಗಿನ ಸಹರಾ ಮರುಭೂಮಿ ಸನಿಹದ ಪ್ರದೇಶದಲ್ಲಿ ಡೈನೊಸಾರ್ ಗಳ ಸಮಕಾಲೀನವಾಗಿ ಈ ಮೊಸಳೆ ಪ್ರಭೇದ ಬದುಕು ನಡೆಸಿತ್ತು (ಪಶ್ಚಿಮ ಆಫ್ರಿಕದ ಈಗಿನ ನೈಜರ್ ರಾಷ್ಟ್ರದಲ್ಲಿ ಈ ಮೊಸಳೆಯ ಪಳೆಯುಳಿಕೆಗಳು ಅಸ್ಥಿ ಪಂಜರಗಳ ರೂಪದಲ್ಲಿ ಲಭಿಸಿವೆ). ಆ ಕಾಲದಲ್ಲಿ ಅಲ್ಲಿ ದಟ್ಟ ಹಸಿರು ಮುಸುಕಿದ್ದು ಅದರ ನಡುವೆ ಪ್ರವಹಿಸುತ್ತಿದ್ದ ನದಿಗಳಲ್ಲಿ ವಾಸಿಸುತ್ತಿದ್ದ ಸೂಪರ್ ಮೊಸಳೆಯ ಅಳತೆ, ಶಕ್ತಿ, ಸಾಮರ್ಥ್ಯಗಳದು ಅಗಾಧ ಪ್ರಮಾಣ. ಈ ಮೊಸಳೆಯ ಶರೀರದ ಉದ್ದ




ನಲವತ್ತು ಅಡಿ; ತೂಕ ಎಂಟರಿಂದ ಹತ್ತು ಟನ್! ಆರು ಅಡಿಗೂ ಅಧಿಕ ಉದ್ದದ ದವಡೆಗಳಲ್ಲಿ ಭಾರೀ ಚೂರಿಗಳಂತಿದ್ದ ಒಂದುನೂರು ಹಲ್ಲುಗಳು! ಅದರ ಬೇಟೆ ಸಾಮರ್ಥ್ಯ ಎಷ್ಟಿತ್ತೆಂದರೆ ನೀರಿನ ಸನಿಹ ಬಂದ ಬಲಿಷ್ಠ ಡೈನೊಸಾರ್ ಗಳನ್ನೂ ಈ ಮೊಸಳೆ ಕ್ಷಣಾರ್ಧದಲ್ಲಿ ಕಚ್ಚಿ ಹಿಡಿದು ನೀರಿಗೆಳೆದು ಛಿದ್ರಗೊಳಿಸಿ ನುಂಗಬಲ್ಲದ್ದಾಗಿತ್ತು.

ಪ್ರಸ್ತುತ ಧರೆಯಲ್ಲಿ ಅದೇ ಮೊಸಳೆ ವರ್ಗದ ಎಂದರೆ 'ಕ್ರೋಕೋಡೀಲಿಯನ್' ಗಳ ಮೂರು ಕುಟುಂಬಗಳು ಉಳಿದಿವೆ 'ಹದಿನಾಲ್ಕು ಪ್ರಭೇದಗಳಿರುವ ಕ್ರೋಕೋಡೈಲಿಡೇ ಕುಟುಂಬ, ಎಂಟು ಪ್ರಭೇದಗಳ ಅಲಿಗೇಟರಿಡೇ ಕುಟುಂಬ ಮತ್ತು ಒಂದೇ ಒಂದು ಪ್ರಭೇದವನ್ನು ಹೊಂದಿರುವ ಘವಿಯಲಿಡೇ ಕುಟುಂಬ". ಈ ಮೂರೂ ಕುಟುಂಬಗಳ ಒಟ್ಟು ಇಪ್ಪತ್ಮೂರು ಪ್ರಭೇದಗಳಲ್ಲೂ ಆಸ್ಟ್ರೇಲಿಯದ ಉಪ್ಪು ನೀರಿನ ಮೊಸಳೆಯದೇ ಗರಿಷ್ಠ ಉದ್ದ, ಗಾತ್ರ, ತೂಕ. ಈ ಪ್ರಭೇದ ಇಪ್ಪತ್ತು ಅಡಿ ಉದ್ದ ಬೆಳೆಯುತ್ತದೆ; ಒಂದು ಟನ್ ತೂಕ ತಲುಪುತ್ತದೆ.

ಸ್ಪಷ್ಟವಾಗಿಯೇ ಈಗಿನ ಈ ಅತಿ ದೈತ್ಯ ಮೊಸಳೆ ಪ್ರಭೇದಕ್ಕೂ, ಸೂಪರ್ ಮೊಸಳೆ ಸಾರ್ಕೋಸೂಚಸ್ ಇಂಪರೇಟರ್ ಗೂ ಇರುವ ಅಂತರ ಅಜ ಗಜದಂತೆ! ಹೌದಲ್ಲ?

■ ಎನ್. ವಾಸುದೇವ್